ಶ್ರೀ ಎಸ್.ಎಸ್. ಮಲ್ಲಿಕಾರ್ಜುನ: ಇದಕ್ಕೆ ಸಂಬಂಧಪಟ್ಟಂತೆ ಬೇರೆ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕಳುಹಿಸಿಕೊಟ್ಟರೆ ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ವಿವರವಾದ ಉತ್ತರವನ್ನು ಒದಗಿಸಿಕೊಡುತ್ತೇನೆ.

(ಅ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು:

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 9ನೇ ಪಟ್ಟಿಯಲ್ಲಿರುವ 155 ಪ್ರಶ್ನೆಗಳ ಪೈಕಿ 120ಕ್ಕೆ ಲಿಖಿತ ಮೂಲಕ ನೀಡುವ ಉತ್ತರಗಳನ್ನು ಸಭೆಯ ಮುಂದಿಡುತ್ತೇನೆ.

ರಾಜ್ಯದಲ್ಲಿನ ಪಶುವೈದ್ಯಕೀಯ ಕೇಂದ್ರಗಳಲ್ಲಿ ವೈದ್ಯರ ಮತ್ತು ಔಷಧಿಗಳ ಕೊರತೆ

997(1209) ಶ್ರೀ ಆತ್ಮಾನಂದ ಎಂ.ಎಸ್.(ಮಂಡ್ಯ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿನ ಪಶುವೈದ್ಯಕೀಯ ಆಸ್ಪತ್ರೆಗಳಲ್ಲಿ ವೈದ್ಯರ ಹಾಗೂ ಔಷಧಿಗಳ ಕೊರತೆ ಇರುವುದನ್ನು ಸರ್ಕಾರ ಮನಗಂಡಿದೆಯೇ?

2) ಹಾಗಿದ್ದಲ್ಲಿ ಈ ಕೊರತೆಯನ್ನು ನಿವಾರಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

1) ಹೌದು

2) ಮುಂದಿನ ವರ್ಷದಲ್ಲಿ ಔಷಧಿಗಳ ಹೆಚ್ಚಿನ ವಂಟನಕ್ಕೆ ಕ್ರಮ ಕೈಗೊಳ್ಳಲಾಗುವುದು ಮತ್ತು ಖಾಲಿ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ತುಂಬಲು ಜಿಲ್ಲಾಧಿಕಾರಿಗಳಿಂದ ಕ್ರಮವನ್ನು ಕೈಗೊಂಡಿದೆ, ಪ್ರಕ್ರಿಯೆ ಪ್ರಾರಂಭಗೊಂಡಿದೆ.

ರಾಜ್ಯದ ಹೆದ್ದಾರಿಗಳ ಅಭಿವೃದ್ಧಿ

998 (1210) ಶ್ರೀ ಎಂ.ಎಸ್.ಆತ್ಮಾನಂದ (ಮಂಡ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಪ್ರಮುಖ ರಾಜ್ಯ ಹೆದ್ದಾರಿಗಳನ್ನು (State Highways) ಅಭಿವೃದ್ಧಿಪಡಿಸಲು ಸರ್ಕಾರವು ಕಾರ್ಯಕ್ರಮವನ್ನು ರೂಪಿಸಿದೆಯೆ;

ಆ) ಹಾಗಿದ್ದಲ್ಲಿ ಇದರ ಬಗೆಗಿನ ವಿವರಗಳೇನು;

ಇ) ಈ ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ;

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹೌದು

ಆ) ಕರ್ನಾಟಕ ಸರ್ಕಾರವು ಆಯ್ದ 12 ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ಕರ್ನಾಟಕ ರಾಜ್ಯ ಅಭಿವೃದ್ಧಿ ಯೋಜನಾ ಘಟಕವನ್ನು ರೂಪಿಸಿದೆ. ಅಭಿವೃದ್ಧಿಪಡಿಸಲು ಉದ್ದೇಶಿಸಿರುವ ರಾಜ್ಯ ಹೆದ್ದಾರಿಯ ಒಟ್ಟು ಉದ್ದ 2250 ಕಿ.ಮೀ. ಈ ಯೋಜನೆ 1999 ಕೋಟಿ ರೂ. ಬೇಕಾಗಿದ್ದು, ವಿಶ್ವಬ್ಯಾಂಕಿನ ಸಾಲದ ವತಿಯಿಂದ 1423 ಕೋಟಿ ರೂ.ಗಳ ಹಾಗೂ ರಾಜ್ಯ ಸರ್ಕಾರದ ಅನುದಾನ ವತಿಯಿಂದ 576 ಕೋಟಿ ರೂ.ಗಳನ್ನು ಭರಿಸಬೇಕಾಗುವುದು. ಮೇಲ್ದರ್ಜೆಗೇರಿಸಬೇಕಾದ ರಸ್ತೆಯ 1 ಕಿ.ಮೀ ಉದ್ದಕ್ಕೆ 1.07 ಕೋಟಿ ಹಾಗೂ ಪ್ರಮುಖ ನಿರ್ವಹಣೆಯ ಪ್ರತಿ ಕಿ.ಮೀ ಉದ್ದಕ್ಕೆ 1.21 ಕೋಟಿ ರೂ.ಗಳಾಗುವುವು. ಈ ರಸ್ತೆಗಳಲ್ಲಿನ ಒಟ್ಟು 41 ಸೇತುವೆಗಳನ್ನು ಪುನಃ ನಿರ್ಮಿಸಲು ಯೋಚಿಸಿದೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಸುಮಾರು 7337 ಕಿ.ಮೀ. ಉದ್ದದ ರಾಜ್ಯದ ಹೆದ್ದಾರಿಯನ್ನು 3 ವರ್ಷದ ನಿರ್ವಹಣೆ ಗುತ್ತಿಗೆಯನ್ನು ಕೈಗೊಂಡಿದೆ. ಇದಲ್ಲದೆ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ಈ ಕೆಳಕಂಡ ರಾಜ್ಯ ಹೆದ್ದಾರಿಗಳ ಬೃಹತ್ ನಿರ್ವಹಣೆ ಮತ್ತು ಬಲಪಡಿಸುವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ. ಅ) ಬೆಂಗಳೂರು ಮೈಸೂರು ಆ) ಮೈಸೂರು- ಬಂಟ್ವಾಳ ಇ) ಬಿಳಿಕೆರೆ- ಜೇಲೂರು ಈ) ಜೀವರ್ಗಿ- ಬಿಜಾಪುರ

ಇ) ವಿಶ್ವಬ್ಯಾಂಕ್‌ನ ಮೊದಲನೆಯ ಹಂತದ ಕಾಮಗಾರಿಗಳಿಗೆ ಟೆಂಡರ್ ದಾಖಲುಗಳನ್ನು ನೀಡುವ ಹಂತದಲ್ಲಿ ಇದ್ದು, ಕಾಮಗಾರಿಯನ್ನು ಸೆಪ್ಟೆಂಬರ್ 2001ರಲ್ಲಿ ಪ್ರಾರಂಭಿಸಲು ಉದ್ದೇಶಿಸಲಾಗಿದೆ. 1ನೇ ಹಂತದ ಕಾಮಗಾರಿಗಳ ತಯಾರಿಕಾ ಹಂತದಲ್ಲಿದೆ. ವಿಶ್ವಬ್ಯಾಂಕಿನ ಬೋರ್ಡ್ ಈ ಯೋಜನೆಯನ್ನು ಜೂನ್ 2001 ರಲ್ಲಿ ಅನುಮೋದಿಸಬಹುದೆಂದು ನಿರೀಕ್ಷಿಸಲಾಗಿದೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮದಿಂದ ಕೈಗೆತ್ತೊಂಡಿರುವ ರಸ್ತೆ ನಿರ್ವಹಣೆಯ ಗುತ್ತಿಗೆಗಳನ್ನು ಈಗಾಗಲೇ 13 ವಿಭಾಗದ ಪ್ಯಾಕೇಜ್‌ನ್ನು ಇತ್ಯರ್ಥಗೊಳಿಸಲಾಗಿದೆ. ಬೆಂಗಳೂರು- ಮೈಸೂರು ರಾಜ್ಯ ಹೆದ್ದಾರಿಯ ಕೆಲಸಕ್ಕೆ ಈಗಾಗಲೇ ಗುತ್ತಿಗೆಗಳನ್ನು ಕರೆಯಲಾಗಿದೆ.

ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿನ ತಾಂತ್ರಿಕ ದೋಷಗಳು

999 (1211) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಸಕ್ಕರೆ ಕಾರ್ಖಾನೆ ತಾಂತ್ರಿಕ ದೋಷದಿಂದಾಗಿ ಕಾರ್ಖಾನೆಯ ಯಂತ್ರಗಳು ಪದೇ ಪದೇ ಕೆಟ್ಟು ಹೋಗುತ್ತಾ ಇದ್ದು, ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ಕಬ್ಬು ಅರೆಯುವ ಕಾರ್ಯವು ಇರುವ ಬಗೆಗೆ ತನಿಖಾ ಕ್ರಮಕೈಗೊಳ್ಳುವುದಾಗಿ ಸರ್ಕಾರ ತಿಳಿಸಿದ್ದು ನಿಜವಲ್ಲವೆ;

ಆ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರವು ಕೈಗೊಂಡಿರುವ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಇಲ್ಲ, ತಾಂತ್ರಿಕ ತಜ್ಞರಿಂದ ಅಧ್ಯಯನ ನಡೆಸಲು ಉದ್ದೇಶಿಸಲಾಗಿತ್ತು.